ಕೂಡಿದೆ' ಎಂದು ಹಳೆಯ ಗಂಟುಗಳು ನಮ್ಮ ನೆನಪಿನ ಉಗ್ರಾಣದಲ್ಲಿ ಇಣುಕುತ್ತಿರುತ್ತವೆ.

ನನ್ನ ಗೆಳೆಯ ವಿಠಲಮೂರ್ತಿಗೆ ವಿಚಿತ್ರವಾದ ಹವ್ಯಾಸವೊಂದಿದೆ. ಈ ವಿಠಲಮೂರ್ತಿಗೆ ವಿಲಾಸ ಮೂರ್ತಿ ಎಂದೂ ಕರೆಯುತ್ತಾರೆ. ಆತನ ಕಣ್ಣಿಗೆ ಹೊಸದೇನಾದರೂ ಕಂಡಿತೋ ಮುಗಿಯಿತು. ಅವಶ್ಯಕತೆ ಇರಲಿ, ಬಿಡಲಿ. ಅದು ಬೇಕು ಆತನಿಗೆ. ಹಣದ ಮುಖ ನೋಡೋದಿಲ್ಲ. ಸಾಲ ಮಾಡಿಯಾದರೂ ಸರಿ, ಇಷ್ಟವಾದುದನ್ನು ಪಡೆದೇಬಿಡುತ್ತಾನೆ. ನೀವು ನಂಬಲಿಕ್ಕಿಲ್ಲ. ಈತನ ಬಳಿ ಹದಿನಾರು ಮೊಬೈಲ್ ಸೆಟ್‌ಗಳಿವೆ. ಆರು ಮೋಟಾರ್ ಬೈಕ್‌ಗಳು. ಇನ್ನು ಬಳಸುವ, ಬಳಸಿ ಬಿಸಾಡಿದ ಪೆನ್ನುಗಳಿಗೆ ಲೆಕ್ಕವೇ ಇಲ್ಲ. ಮತ್ತೆ ಆತ ಧಾರಣ ಮಾಡಿದ, ಹಳತೆಂದು ಮೂಲೆಗೆಸೆದ ಡ್ರೆಸ್‌ಗಳದೆ ಒಂದು ಗುಡಾಣ. ಅವೆಷ್ಟು ಚಪ್ಪಲಿ ಜೋಡುಗಳೊ, ಬೂಟಿನ ಗೂಡುಗಳೊ...! ಆದರೆ, ವಿಠಲನ ಹೃದಯ ವಿಶಾಲವಾದುದು. ಈ ದಿನ ಹೊಸ ನೆಂಟ ಬಂದನೆಂದುಕೊಂಡು, ನಿನ್ನೆಯ ಹಳೆಯ ಗಂಟನ್ನು ಆತ ಬಿಟ್ಟುಕೊಡುವವನಲ್ಲ. ಹೊಸದನ್ನು ಬರಮಾಡಿಕೊಳ್ಳುತ್ತ, ಹಳೆಯದನ್ನು ಒಪ್ಪವಾಗಿ ಅಟ್ಟದ ಮೇಲೆ ಅಲಂಕರಿಸಿರುತ್ತಾನೆ. ಹೀಗಾಗಿ ಅವನ ಮನೆಯೇ ಒಂದು ಮ್ಯೂಜಿಯಂ. ಅದು ಹಳೆಯ ಹೊಸತುಗಳ ಸಂಗಮ. ನೆಂಟರೂ ಉಂಡಂತಾಗಿರಬೇಕು, ಗಂಟೂ ಉಳಿದಿರಬೇಕು ಎಂಬ ಕಂಜೂಸ್ ಮನಸ್ಸು ವಿಠಲಮೂರ್ತಿಗಿಲ್ಲ. ಹಳೆಯ ಗಂಟನ್ನೂ, ಹೊಸ ನೆಂಟಸ್ತಿಕೆಯನ್ನು ಹಟೋತ್ಸಾಹದಿಂದ ನೋಡಿಕೊಳ್ಳುತ್ತಾನೆ. ಅದರಲ್ಲಿ ಅವನಿಗೆ ಹಿತ ಸಂತಸವಿದೆ. ಅದೊಂದು ರೀತಿಯ ಅಹಂ ತೃಪ್ತಿ ಆತನದು.

ಹಸಿದವನಿಗೆ ಬೇವು ಕೂಡಾ ಬೆಲ್ಲಕ್ಕಿಂತ ಅಧಿಕ ಸಿಹಿ. ಯಾಕೆಂದರೆ, ಆತನಿಗೆ ಏನಾದರೂ ಬೇಕಾಗಿರುತ್ತದೆ. ಅದೇ ಹೊಟ್ಟೆ ತುಂಬಿದವನಿಗೆ ಹುಗ್ಗಿಯೂ ಸಹ ಮುಳು ಮುಳು. ನಮಗೆ ಬೇಕೆನಿಸಿದ್ದ ವಸ್ತು, ಅದು ಹೇಗೆಯೇ ಇರಲಿ, ಅಂದವಾಗಿಯೇ ಕಾಣುತ್ತದೆ. ಹಸಿದವನಿಗೆ ಬೇವು ಸಹ ಬೆಲ್ಲದ ರುಚಿ ಕೊಡುವಂತೆ. ಅದೇ ಆ ವಸ್ತುವಿನ ಅಗತ್ಯತೆ ಮುಗಿದಾಗ, ಅದರ ಹಸಿವು ನಮಗಿರುವುದಿಲ್ಲ.

ಹೊಸದಾಗಿ ಖರೀದಿಸಿದ ಸ್ಕೂಟರ್‌ಗೊ ಇಲ್ಲಾ



ಮೋಟಾರ್ ಬೈಕ್‌ಗೊ ಪ್ರಾರಂಭದ ದಿನಗಳಲ್ಲಿ ಸಿಗುತ್ತಿದ್ದ ವಿಐಪಿ ಟ್ರೀಟ್‌ಮೆಂಟ್, ಬರಬರುತ್ತ ಸೊರಗುತ್ತದೆ. ಅಂದು ನಾವು ಹೊಸ ಸ್ಕೂಟರನ್ನು ಬರಮಾಡಿಕೊಂಡ ಆ ಸಂಭ್ರಮವೆಂಥದ್ದು ಅಂತೀರಿ! ಆಳೆತ್ತರದ ಸೇವಂತಿ ಹೂವಿನ ಮಾಲೆ ಹಾಕಿದ್ದೇನು! ಆರತಿ ಬೆಳಗಿ ಪೂಜೆ ಮಾಡಿದ್ದೇನು! ಬಂಧುಬಾಂಧವರಿಗೆಲ್ಲ ಸಿಹಿಹಂಚಿ ಬಂದದ್ದೇನು? ಘಮಘಮಿಸುವ ಮೈಸೂರು ಮಲ್ಲಿಗೆ ಧರಿಸಿದ್ದ ಅರ್ಧಾಂಗಿಯನ್ನು ಹಿಂದೆ ಕೂಡ್ರಿಸಿಕೊಂಡು ಊರೆಲ್ಲ ಸುತ್ತಿ ಬಂದದ್ದೇನು? ನಾಜೂಕು ರಾಣಿಯಂತಿದ್ದ ಆ ಸ್ಕೂಟರನ್ನು ನೋಡಿಕೊಂಡಿದ್ದೇನು? ಅವೆಲ್ಲ ಸ್ಕೂಟರ್‌ನೊಂದಿಗಿನ ನಮ್ಮ ಹೊಸ ನೆಂಟಸ್ತಿಕೆ ಹೊಸದಿನಗಳು. ಮೊನ್ನೆ ಹೊಸ ಕಾರ್ ತಗೊಂಡೆ. ಈಗ ಸ್ಕೂಟರ್ ಮೂಲೆ ಸೇರಿದೆ.

ಹಿಂದೊಮ್ಮೆ ಭರ್ಜರಿ ಕೇಶಸಂಪತ್ತು ಹೊಂದಿದ್ದ ಕೇಶರಾಣಿ, ಇಂದು ವಿರಳಗೂದಲಿನವಳಾಗಿದ್ದಾಳೆ. ಹಿಂದಿನ ಹಾಗೆ ಒತ್ತುಕೂದಲಿನ ತುರುಬು ಈಗಿಲ್ಲ. ಕಾಲ ಒಂದೇ ರೀತಿ ಇರೋದಿಲ್ಲ. ಇಂದು ಏರಿದ್ದು ನಾಳೆಗೆ ಇಳಿಯುತ್ತದೆ. ಬಂದದ್ದು ಹೋಗುತ್ತದೆ. ತುಂಬಿದ್ದು ಖಾಲಿಯಾಗುತ್ತದೆ. ಹೊಸತು ಹಳತಾಗುತ್ತದೆ.

ಹೊಸದಾಗಿ ಮನೆ ಸೇರಿದ ಸೊಸೆಯನ್ನು ಪ್ರೀತಿಯಿಂದ ಕಾಣುವ ಅತ್ತೆಯ ಮನಸ್ಥಿತಿ ಕೊನೆಯವರೆಗೂ ಹಾಗೆಯೇ ಉಳಿಯುವುದಿಲ್ಲ. ಗೋಣಿ ಚೀಲವನ್ನು ಎತ್ತೆತ್ತಿ ಒಗೆಯುವ ಹೊಸ ಅಗಸನ ಪ್ರಾರಂಭದ ಹುಮ್ಮಸ್ಸು ಕ್ರಮೇಣ ಕುಗ್ಗುತ್ತದೆ. ಕಾಲ ಬದಲಾಗುತ್ತಲೇ ಇರುತ್ತದೆ.

ಹಳೆಯ ಗಂಟು ನೋಡಿ ಹೊಸ ನೆಂಟ ನಗುತ್ತಿರಬಹುದು, ಹಣ್ಣೆಲೆ ಉದುರುವಾಗ ಹಸಿರೆಲೆ ನಕ್ಕಂತೆ. ಆದರೆ ಇಂದಿನ ಈ ಹೊಸ ನೆಂಟ ನಾಳೆಗೆ ಹಳೆಯ ಗಂಟಾಗೋದಿಲ್ಲ ಅನ್ನೋದಕ್ಕೇನು ಗ್ಯಾರಂಟಿ? ಬದಲಾಗುತ್ತಿರುವ ನೆಂಟಸ್ತಿಕೆಯೊಂದಿಗೆ ನಮ್ಮ ಬದುಕಿನ ಗಂಟನ್ನು ಹೊಂದಿಸಿಕೊಂಡು ಹೋಗುವುದರಲ್ಲಿ ಜಾಣತನವಿದೆ. ಬದುಕಿನಲ್ಲಿ ಹಳೆಯ ಗಂಟಿನೊಂದಿಗೆ ಹೊಸ ನೆಂಟನೂ ಜತೆಗಿರಬೇಕು. ಹಳೆಯ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಅಂತಾರಲ್ಲಾ ಹಾಗೆ. ಇದು ಸುಂದರ ಬದುಕಿನ ನಿರಾಳ ಸೂತ್ರವಾದೀತು! ಮತ್ತೆ ಅದು ಆಗಬೇಕಾದುದೇ. ●